www.prepp.in

Prepp
Your Personal Exams Guide

UPSC CSE 2016 MAINS PAPER 6 DECEMBER 09, 2016 KANNADA LITERATURE OPTIONAL PAPER - I QUESTION PAPER



# KANNADA

## PAPER—I

## ( LITERATURE )

Time Allowed : Three Hours | Maximum Marks : 250

### QUESTION PAPER SPECIFIC INSTRUCTIONS

**Please read each of the following instructions carefully before attempting questions**

There are EIGHT questions divided in two Sections.

Candidate has to attempt FIVE questions in all.

Question Nos. **1** and **5** are compulsory and out of the remaining, THREE are to be attempted choosing at least ONE question from each Section.

The number of marks carried by a question/part is indicated against it.

Answers must be written in KANNADA (Kannada script).

Word limit in questions, wherever specified, should be adhered to.

Attempts of questions shall be counted in sequential order. Unless struck off, attempt of a question shall be counted even if attempted partly. Any page or portion of the page left blank in the Question-cum-Answer Booklet must be clearly struck off.

---

# ಕನ್ನಡ

## ಪತ್ರಿಕೆ—I

## (ಸಾಹಿತ್ಯ)

ವೇಳೆ : ಮೂರು ಗಂಟೆ | ಗರಿಷ್ಠ ಅಂಕಗಳು : 250

### ಪ್ರಶ್ನೆ ಪತ್ರಿಕೆ ವಿಶೇಷ ಸೂಚನೆಗಳು

ದಯವಿಟ್ಟು ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಕೆಳಗಿನ ಪ್ರತಿಯೊಂದು ಸೂಚನೆಗಳನ್ನು ಸರಿಯಾಗಿ ಓದಿರಿ.

ಇದರಲ್ಲಿ ಎಂಟು ಪ್ರಶ್ನೆಗಳಿದ್ದು ಎರಡು ಭಾಗಗಳಲ್ಲಿ ವಿಂಗಡಿಸಲಾಗಿದೆ.

ಅಭ್ಯರ್ಥಿಗಳು ಎಲ್ಲಾ ಪ್ರಶ್ನೆಗಳಲ್ಲಿ ಐದು ಪ್ರಶ್ನೆಗಳಿಗೆ ಉತ್ತರಿಸಬೇಕು.

ಅಭ್ಯರ್ಥಿಗಳು ಪ್ರಶ್ನೆಗಳ ಸಂಖ್ಯೆ: **1** ಮತ್ತು **5**ಕ್ಕೆ ಉತ್ತರಿಸುವುದು ಕಡ್ಡಾಯ, ಮತ್ತು ಇನ್ನುಳಿದ ಮೂರು ಪ್ರಶ್ನೆಗಳಲ್ಲಿ ಪ್ರತಿಯೊಂದು ವಿಭಾಗದಿಂದ ಕನಿಷ್ಠ ಒಂದು ಪ್ರಶ್ನೆಗಾದರೂ ಉತ್ತರಿಸಬೇಕು.

ಪ್ರತಿಯೊಂದು ಪ್ರಶ್ನೆಗಳಿಗಿರುವ ಅಂಕಗಳನ್ನು ಆಯಾ ಪ್ರಶ್ನೆಗಳ ಮುಂದೆಯೇ ನಮೂದಿಸಲಾಗಿದೆ.

ಉತ್ತರಗಳನ್ನು ಅತ್ಯಗತ್ಯವಾಗಿ ಕನ್ನಡದಲ್ಲಿಯೇ ಬರೆಯಬೇಕು.

ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರ್ದಿಷ್ಟಪಡಿಸಿದ ಶಬ್ದಗಳ ಮಿತಿಯನ್ನು ಸರಿಯಾಗಿ ಪಾಲಿಸಬೇಕು.

ಉತ್ತರಿಸಿದ ಪ್ರಶ್ನೆಗಳನ್ನು ಕ್ರಮಬದ್ಧವಾಗಿ ಪರಿಗಣಿಸಿ ಎಣಿಕೆ ಮಾಡಲಾಗುವುದು. ಅಪೂರ್ಣ ಉತ್ತರಗಳನ್ನು ಹೊಡೆದು ಹಾಕದಿದ್ದಲ್ಲಿ ಅವುಗಳನ್ನು ಎಣಿಕೆಯಲ್ಲಿ ಪರಿಗಣಿಸಲಾಗುತ್ತದೆ. ಪ್ರಶ್ನೋತ್ತರ ಸಹಿತವಾಗಿರುವ ಪುಸ್ತಿಕೆಯಲ್ಲಿ ಬರೆಯದೆ ಉಳಿದ ಪೂರ್ಣ ಖಾಲಿ ಪುಟಗಳನ್ನು ಮತ್ತು ಭಾಗಶಃ ಖಾಲಿ ಇರುವ ಪುಟಗಳನ್ನು ಸ್ಪಷ್ಟವಾಗಿ ಹೊಡೆದು ಹಾಕಬೇಕು.

www.prepp.in

Prepp
Your Personal Exams Guide

## SECTION—A

**1.** ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ *150* ಶಬ್ದಗಳಿಗೆ ಮೀರದಂತೆ ಇರಬೇಕು. ಪ್ರತಿ ಉಪಪ್ರಶ್ನೆಗೂ 10 ಅಂಕಗಳು : 10×5=50

(*a*) ಕನ್ನಡ ಭಾಷೆಯ ಪ್ರಾಚೀನತೆ

(*b*) ಪಂಪಭಾರತದ ಕಾವ್ಯನಾಯಕ

(*c*) ರತ್ನಾಕರವರ್ಣಿಯ ಭರತೇಶವೈಭವದಲ್ಲಿ ಯೋಗಭೋಗ ಸಮನ್ವಯ

(*d*) ಪುರಂದರದಾಸರ ಕೀರ್ತನೆಗಳಲ್ಲಿ ಲೋಕಾನುಭವ

(*e*) ಪ್ರಗತಿಶೀಲ ಸಾಹಿತ್ಯದ ಆಶಯಗಳು

**2.** (*a*) ಕನ್ನಡ ಭಾಷೆಯ ವಿವಿಧ ಅವಸ್ಥೆಗಳನ್ನು ನಿದರ್ಶನಗಳೊಂದಿಗೆ ನಿರೂಪಿಸಿರಿ. 15

(*b*) ಹರಿಹರನ ಕೃತಿಗಳು ವಸ್ತು, ಭಾಷೆ, ಛಂದಸ್ಸಿನ ದೃಷ್ಟಿಯಿಂದ ಹೇಗೆ ವಿನೂತನವಾಗಿವೆ? ಚರ್ಚಿಸಿರಿ. 15

(*c*) ಕುಮಾರವ್ಯಾಸಭಾರತದ ಕರ್ಣ ದುರಂತ ನಾಯಕ. ಚರ್ಚಿಸಿರಿ. 10

(*d*) ನವ್ಯ ಸಾಹಿತ್ಯದ ಸಾಧನೆ ಹಾಗೂ ಅದರ ಇತಿಮಿತಿಗಳನ್ನು ವಿಶ್ಲೇಷಿಸಿರಿ. 10

**3.** (*a*) ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಭಾಷಾ ಸ್ವೀಕರಣ ಪ್ರಕ್ರಿಯೆಯ ಪಾತ್ರವನ್ನು ಉದಾಹರಣೆಗಳೊಂದಿಗೆ ವಿಶದಪಡಿಸಿರಿ. 15

(*b*) ನಾಗಚಂದ್ರ ಜೈನರಾಮಾಯಣ ಪರಂಪರೆಯನ್ನು ಪಂಪರಾಮಾಯಣದಲ್ಲಿ ಹೇಗೆ ಸಾಕಾರಗೊಳಿಸಿದ್ದಾನೆ? ವಿವರಿಸಿರಿ. 15

(*c*) ಮಧ್ಯಕಾಲೀನ ಕನ್ನಡ ಸಾಹಿತ್ಯದ ಪ್ರೇರಣೆ ಧೋರಣೆಗಳನ್ನು ವಿವೇಚಿಸಿರಿ. 10

(*d*) ಆಧುನಿಕ ಕನ್ನಡ ಸಾಹಿತ್ಯದಲ್ಲಿ ನವೋದಯ ಸಾಹಿತ್ಯದ ಸ್ಥಾನಮಾನವನ್ನು ಕುರಿತು ವಿವೇಚಿಸಿರಿ. 10

**4.** (*a*) ದ್ರಾವಿಡ ಭಾಷೆಗಳ ಸಾಮಾನ್ಯ ವೈಶಿಷ್ಟ್ಯಗಳು ಯಾವುವು? ಉದಾಹರಣೆಗಳೊಂದಿಗೆ ವಿವರಿಸಿರಿ. 15

(*b*) 'ಜೀವದಯೆಯೇ ಜೈನ ಧರ್ಮದ ಸಾರ' ಎಂಬ ಉಕ್ತಿ ಜನ್ನನ 'ಯಶೋಧರ ಚರಿತೆ'ಯಲ್ಲಿ ಸಾಕಾರಗೊಂಡ ಬಗೆಯನ್ನು ವಿಶದಪಡಿಸಿರಿ. 15

(*c*) ವಚನ ಸಾಹಿತ್ಯದಲ್ಲಿ ವ್ಯಕ್ತವಾದ ಜೀವನ ಮೌಲ್ಯಗಳನ್ನು ನಿರೂಪಿಸಿರಿ. 10

(*d*) ದಲಿತ ಬಂಡಾಯ ಸಾಹಿತ್ಯ ಎದುರಿಸಿದ ವೈಚಾರಿಕ ಸವಾಲುಗಳನ್ನು ವಿವರಿಸಿರಿ. 10

Prepp
Your Personal Exams Guide

## SECTION—B

5. ಕೆಳಗೆ ಕೊಟ್ಟಿರುವ ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ. ಪ್ರತಿಯೊಂದು ಟಿಪ್ಪಣಿ *150* ಪದಗಳಿಗೆ ಮೀರದಂತಿರಬೇಕು : 10×5=50

   *(a)* ಸಾಹಿತ್ಯ ವಿಮರ್ಶೆಯ ಪ್ರಾಚೀನ ಆಧುನಿಕ ಧೋರಣೆಗಳು

   *(b)* ಕಾವ್ಯ ಲಕ್ಷಣಗಳು

   *(c)* ಕರ್ನಾಟಕದಲ್ಲಿ ವಾಸ್ತುಶಿಲ್ಪದ ವಿಕಾಸ ಮತ್ತು ವೈವಿಧ್ಯತೆ

   *(d)* ಕನ್ನಡನಾಡಿನ ಶೈವ ಧಾರ್ಮಿಕ ಕೇಂದ್ರಗಳು

   *(e)* ಹೊಯ್ಸಳರ ಕಾಲದ ದೇವಾಲಯಗಳು

6. *(a)* 'ಧ್ವನಿರಾತ್ಮಾಕಾವ್ಯಸ್ಯ' ಆನಂದವರ್ಧನನ ಧ್ವನಿ ಸಿದ್ಧಾಂತದ ವಿಶಿಷ್ಟತೆ ಮತ್ತು ಧ್ವನಿ ವೈವಿಧ್ಯವನ್ನು ಉದಾಹರಣೆಗಳೊಂದಿಗೆ ವಿಶದಪಡಿಸಿರಿ. 15

   *(b)* ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯ ವಿಮರ್ಶೆಯ ಪರಂಪರೆಯನ್ನು ಕುರಿತು ವಿವೇಚಿಸಿರಿ. 15

   *(c)* ವಿಜಯನಗರ ಕಾಲದ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಕಲೆಯ ವೈಶಿಷ್ಟ್ಯಗಳನ್ನು ವಿವರಿಸಿರಿ. 10

   *(d)* ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ವೀರಶೈವ ಧರ್ಮ ನೀಡಿದ ಕೊಡುಗೆಯನ್ನು ಚರ್ಚಿಸಿರಿ. 10

7. *(a)* ಕಾವ್ಯಸೌಂದರ್ಯವನ್ನುಂಟುಮಾಡುವ ಅಲಂಕಾರಗಳ ವೈವಿಧ್ಯತೆಯನ್ನು ನಿದರ್ಶನಗಳೊಂದಿಗೆ ನಿರೂಪಿಸಿರಿ. 15

   *(b)* ಔಚಿತ್ಯ ಸಿದ್ಧಾಂತದ ಪರಿಕಲ್ಪನೆ ಮತ್ತು ಅದು ಬೆಳೆದುಬಂದ ಬಗೆಯನ್ನು ವಿಶದಪಡಿಸಿರಿ. 15

   *(c)* ಕರ್ನಾಟಕದ ಗೊಮ್ಮಟ ಶಿಲ್ಪಗಳ ವಿಶಿಷ್ಟತೆಯನ್ನು ಕುರಿತು ವಿವರಿಸಿರಿ. 10

   *(d)* ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಗೆ ಮತಧರ್ಮಗಳ ಕೊಡುಗೆ ಕುರಿತು ವಿವೇಚಿಸಿರಿ. 10

8. *(a)* ಸ್ತ್ರೀವಾದಿ ವಿಮರ್ಶೆಯ ತತ್ವಮೀಮಾಂಸೆ ಕನ್ನಡ ಮಹಿಳಾ ಸಾಹಿತ್ಯದಲ್ಲಿ ಹೇಗೆ ಆಕೃತಿಗೊಂಡಿದೆ? ವಿವರಿಸಿರಿ. 15

   *(b)* ಕರ್ನಾಟಕ ಏಕೀಕರಣ ಚಳುವಳಿ ನಡೆದುಬಂದ ದಾರಿಯನ್ನು ವಿವರಿಸಿರಿ. 15

   *(c)* ಸಂಗೀತ ಪ್ರಪಂಚಕ್ಕೆ ಕರ್ನಾಟಕ ಸಂಗೀತದ ಕೊಡುಗೆ ಕುರಿತು ವಿವೇಚಿಸಿರಿ. 10

   *(d)* ಕರ್ನಾಟಕದಲ್ಲಿ ನೃತ್ಯಕಲೆಯ ವಿಕಾಸ ಮತ್ತು ವೈವಿಧ್ಯವನ್ನು ಕುರಿತು ವಿವರಿಸಿರಿ. 10

★ ★ ★